# ಮನುಸ್ಮೃತಿ ದಹನ

ಅಪ್ರತಿಮ ಓದಾಳಿ, ಅಪಾರ ಪುಸ್ತಕ ಪ್ರೇಮಿಯಾಗಿದ್ದ ಭೀಮರಾವ್ ರಾಮಜೀ ಅಂಬೇಡ್ಕರ್ ಅವರು 'ಮನುಸ್ಮೃತಿ' ಕೃತಿಯನ್ನು ಡಿಸೆಂಬರ್ 25. 1927ರಂದು ಸುಟ್ಟದ್ದು ಏಕೆ? ಅಂದಿನ ಮೇಲ್ಜಾತಿಗಳು ದಲಿತರಿಗೆ ಕೆರೆ ಬಾವಿಗಳನ್ನು ಮುಟ್ಟಿ ನೀರು ಕುಡಿಯಲು ಅವಕಾಶ ಕೊಡುತ್ತಿರಲಿಲ್ಲ. ಬೊಗಸೆ ನೀರಿಗಾಗಿ ದಲಿತಾದಿ ಅಸ್ಪೃಶ್ಯರು ತಾಸುಗಟ್ಟಲೆ ನೀರ ತಟಾಕಗಳ ಎದುರು ಕಾಯುತ್ತ; ಮೇಲ್ಜಾತಿಯವರು ಕರುಣೆ ತೋರಿ ನೀರು ಸುರಿದರೆ ಕುಡಿಯಬೇಕು. ಇಂಥ ಅಮಾನವೀಯ, ಅನಿಷ್ಟ ಸಂಪ್ರದಾಯಗಳಿಗೆ ಶಾಶ್ವತವಾಗಿ ಮುಕ್ತಾಯ ಹಾಡಲೆಂದು ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ಮಾಹಾಡ್‌ದಲ್ಲಿನ ಚೌಡಾರ ಕೆರೆಯ ನೀರು ಬಳಸುವ ಹಕ್ಕಿಗಾಗಿ ಹೋರಾಟ ನಡೆಸಿದ್ದರು. ಕೆರೆಯ ನೀರನ್ನು ದಲಿತರು ಮುಟ್ಟಿದ್ದಕ್ಕಾಗಿ ಸವರ್ಣೀಯರು ಕೆರೆಯ ಶುದ್ಧೀಕರಣ ಮಾಡಿದ್ದರು. ಈ ಹೀನ ಕೃತಿಯಿಂದಾಗಿ ಶೋಷಿತರು ರೊಚ್ಚಿಗೆದ್ದರಲ್ಲದೆ ಬಾಬಾಸಾಹೇಬರ ನೇತೃತ್ವದಲ್ಲಿ ಅದಕ್ಕೆ ತಕ್ಕ ಉತ್ತರ ಕೊಡಲು ಮುಂದಾದರು. ಜಾತಿ ವ್ಯವಸ್ಥೆಯನ್ನು ಬಲವಾಗಿ ಪ್ರತಿಪಾದಿಸಿ, ಅಸ್ಪೃಶ್ಯತೆಯನ್ನು ನಿಯಮಬದ್ಧಗೊಳಿಸಿದ ದುಷ್ಟಕೃತಿ ಮನುಸ್ಮೃತಿಯನ್ನು ಜನಮಾನಸದಿಂದ ಉಚ್ಚಾಟಿಸಬೇಕಿತ್ತು. ಇದರ ಮೂರ್ತರೂಪವಾಗಿ ಸತ್ಯಾಗ್ರಹದ ಪೆಂಡಾಲ್‌ನಲ್ಲಿ ಎತ್ತರದ ವೇದಿಕೆಯೊಂದನ್ನು ನಿರ್ಮಿಸಿ ರಾತ್ರಿ 9 ಗಂಟೆಗೆ ಮನುಸ್ಮೃತಿಯನ್ನು ಬೆಂಕಿಗಿಟ್ಟರು. ಬಾಬಾಸಾಹೇಬರ ಅನುಯಾಯಿಗಳಾಗಿದ್ದ, ಚಿತ್ಪಾವನ ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದ ಗಂಗಾಧರ ನೀಲಕಂಠ ಸಹಸ್ರಬುದ್ಧೆ ಮತ್ತು ಇತರರು ಸೇರಿ ಮನುಸ್ಮೃತಿಯ ಪ್ರತಿಗಳನ್ನು ಅಗ್ನಿಗೆ ಎಸೆದಿದ್ದರು.

ಬಾಬಾ ಸಾಹೇಬ ತಮ್ಮ ಬದುಕಿನಲ್ಲಿ ಪುಸ್ತಕ ಅರ್ಥಾತ್ ಜ್ಞಾನವನ್ನು ಪ್ರೀತಿಸಿದಷ್ಟು ಇನ್ನೊಬ್ಬರನ್ನು ಪ್ರೀತಿಸಲಿಲ್ಲ. ಪುಸ್ತಕ ದಾಹಿಯೊಬ್ಬರು ಅದನ್ನು ಸುಡಬೇಕಾದರೆ, ಆ ಪುಸ್ತಕದಲ್ಲಿ ಅಂಥದ್ದೇನಿರಬೇಕು? ಎಂದು ಕುತೂಹಲ ಮೂಡದೆ ಇರದು. ಬಾಬಾಸಾಹೇಬರು ಮನುಸ್ಮೃತಿ ದಹನ ಮಾಡಿದಂದಿನಿಂದ ಅದರಲ್ಲಿ ಕೊಳೆ ಇದೆ ಎಂಬುದಂತೂ ಭಾರತೀಯರಿಗೆ ಮನವರಿಕೆಯಾಯಿತು. 1927 ರಿಂದ ಅವ್ಯಾಹತವಾಗಿ ಡಿಸೆಂಬರ್ 25ರಂದು ಸಾಂಕೇತಿಕವಾಗಿ ಮನುಸ್ಮೃತಿ ದಹನ ದಿನವನ್ನು ಪ್ರಗತಿಪರರು ಆಚರಿಸಿಕೊಂಡು ಬರುತ್ತಿದ್ದಾರೆ.

ಇಂದಿಗೂ ಮನುಸ್ಮೃತಿಯೇ ನಮ್ಮ ಸಂವಿಧಾನವಾಗಬೇಕು, ಅಲ್ಲಿರುವ ಎಲ್ಲ ನಿಯಮಗಳು ದೈವ ನಿರ್ಮಿತ, ಅವುಗಳನ್ನು ಉಲ್ಲಂಘಿಸಲಾಗದು ಎಂದು ವಾದಿಸುವವರು ಇದ್ದಾರೆ. ಅಂಥವರ ಸಂಖ್ಯೆ ಹೆಚ್ಚಾಗುತ್ತಿರುವುದು ವರ್ತಮಾನದ ದುರಂತವಾಗಿದೆ. ಮನುಸ್ಮೃತಿಯಲ್ಲಿ ಏನಿದೆ? ಕೆಲವು ಉದಾಹರಣೆಗಳನ್ನು ನೋಡಿದರೂ ಸಾಕು ಅದರ ಅಪಾಯ ಮನವರಿಕೆಯಾಗದಿರದು.

ಮನುಸ್ಮೃತಿಯ ಅಧ್ಯಾಯ 8ರಲ್ಲಿ ಶೂದ್ರರನ್ನು ಕುರಿತು ನೂರಾರು ಅಪಮಾನಕಾರಕ ಶ್ಲೋಕಗಳನ್ನು ಒಳಗೊಂಡಿದೆ. ಉದಾಹರಣೆಗೆ ಶ್ಲೋಕ 270 'ಉಪನಯನ ಸಂಸ್ಕಾರ ಹೊಂದಲು ಅರ್ಹತೆಯಿಲ್ಲದ ಶೂದ್ರನು ದ್ವಿಜಾತಿಯವರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಹೀನವಾದ ಕೆಟ್ಟ ಮಾತುಗಳಿಂದ ಬೈದರೆ, ಕೆಳಜಾತಿಯಲ್ಲಿ ಹುಟ್ಟಿದ ಶೂದ್ರನ ನಾಲಿಗೆಯನ್ನು ಛೇದಿಸತಕ್ಕದ್ದು. ಏಕೆಂದರೆ ಅವನು ಕೆಳಜಾತಿಯವನು'. ಅಧ್ಯಾಯ 4 ಶ್ಲೋಕ 99 'ಶೂದ್ರರ ಬಳಿಯಲ್ಲಿ ಕುಳಿತು ವೇದ ಓದಬಾರದು' ಎಂದರೆ, ಅಧ್ಯಾಯ 8 ಶ್ಲೋಕ 22 'ಯಾವ ರಾಷ್ಟ್ರವು ಹೆಚ್ಚಾಗಿ ಶೂದ್ರರಿಂದಲೇ ತುಂಬಿರುತ್ತದೆಯೋ, ನಾಸ್ತಿಕರಿಂದ ಆಕ್ರಮಿಸಲ್ಪಡುತ್ತದೆಯೋ, ಬ್ರಾಹ್ಮಣ ರಹಿತವಾಗಿರುತ್ತದೆಯೋ ಆ ರಾಜ್ಯವು ದುರ್ಭಿಕ್ಷ–ರೋಗಗಳಿಂದ ಜರ್ಜರಿತವಾಗಿ ಬೇಗನೆ ನಾಶ ಹೊಂದುತ್ತದೆ' ಎಂದು ಹೇಳುತ್ತದೆ. ಶ್ಲೋಕ 8–413 'ಶೂದ್ರನು ಸಂಬಳಕ್ಕೆ ಗೊತ್ತು ಮಾಡಿಕೊಂಡವನಾಗಿರಲಿ ಅಥವಾ ಇಲ್ಲದಿರಲಿ ಅಂಥ ಶೂದ್ರನಿಂದ ಬ್ರಾಹ್ಮಣನು ತನ್ನ ಸೇವೆ ಮಾಡಿಸಿಕೊಳ್ಳಬೇಕು. ಏಕೆಂದರೆ ಶೂದ್ರನು ಬ್ರಾಹ್ಮಣನ ಸೇವೆಗಾಗಿಯೇ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದ್ದಾನೆ'. ಅಧ್ಯಾಯ 10–32 'ಚಂಡಾಲರು ಹಾಗೂ ಕೊಳಕು ಜನರು ಒಡಕು ಮಣ್ಣಿನ ಪಾತ್ರೆಗಳಲ್ಲಿಯೇ ಉಣ್ಣಬೇಕು'.

ಮುಂದುವರೆದು ಅಧ್ಯಾಯ 10–54 'ಚಂಡಾಲ ಮತ್ತು ಶ್ವಪಚರು ಭಿಕ್ಷೆ ಬೇಡಿಯೇ ಉಣ್ಣಬೇಕು. ಅವರಿಗೆ ಊಟವನ್ನು ಒಡಕು ಪಾತ್ರೆಯಲ್ಲಿ ಬಡಿಸಬೇಕು. ಗ್ರಾಮಗಳಲ್ಲಾಗಲಿ, ನಗರದಲ್ಲಾಗಲೀ ಇವರು ರಾತ್ರಿ ವೇಳೆ ಸಂಚರಿಸಬಾರದು' ಎಂದು ಹೇಳುತ್ತದೆ. ಇನ್ನು ಮಹಿಳೆಯರ ಬಗೆಗಂತೂ ಮನಸ್ಮೃತಿ ಮರಣ ಶಾಸನವನ್ನೇ ಬರೆದಿದೆ. ಎಲ್ಲ ವರ್ಣಗಳಲ್ಲಿನ ಮಹಿಳೆಯರು ಶೂದ್ರರೆ. ಅಧ್ಯಾಯ 2– 213 'ಪುರುಷರ ಮನಸ್ಸು ಕೆಡಿಸುವುದೇ ನಾರಿಯರ ಸ್ವಭಾವವಾಗಿದೆ'. ಅಧ್ಯಾಯ 5–154 'ಪತಿಯ ನಡತೆಯು ಚೆನ್ನಾಗಿಲ್ಲದಿದ್ದರೂ, ಅವನು ಕಾಮಾತುರನಾಗಿ ಅನ್ಯ ಹೆಂಗಸರಲ್ಲಿ ಮನಸ್ಸಿಟ್ಟರೂ, ದುರ್ಗುಣಿಯಾಗಿದ್ದರೂ ಸಾಧ್ವಿಯಾದ ಹೆಂಡತಿಯು ಆ ತನ್ನ ಪತಿಯನ್ನು ದೇವರೆಂದೇ ಭಾವಿಸಿ ಅವನ ಸೇವೆ ಮಾಡಬೇಕು'. 9–19 'ಸ್ತ್ರೀಯರಿಗೆ ಮಂತ್ರಪೂರ್ವಕವಾದ ಧರ್ಮಸಂಸ್ಕಾರಗಳಿಲ್ಲ' ಎಂದು ಶಾಸ್ತ್ರ ಹೇಳುತ್ತದೆ. ಮನುಸ್ಮೃತಿಯ ಉದ್ದಕ್ಕೂ ಕೈಯಿಟ್ಟಲ್ಲಿ ಇಂಥ ನೂರಾರು ಶ್ಲೋಕಗಳು ಹೇಸಿಗೆ ಬರಿಸುತ್ತವೆ. ಅಷ್ಟೇ ಅಲ್ಲ, ಅನಿಯಂತ್ರಿತ ರೋಷ ಉಕ್ಕುತ್ತದೆ. ಇಂದಿಗೂ ಈ ಮನುಧರ್ಮ ಶಾಸ್ತ್ರದ ವಿಚಾರಗಳೆ ಶ್ರೇಷ್ಠವೆಂದು ನಂಬಿಸಿ ವೈದಿಕ ಪುರೋಹಿತಶಾಹಿ ವರ್ಗ ಜನಮಾನಸವನ್ನು ಕಟ್ಟಿ ಆಳುತ್ತಿರುವುದನ್ನು ಗಮನಿಸುತ್ತಿದ್ದೇವಷ್ಟೇ.

ಅಧ್ಯಾಯ 8–365 'ತನಗಿಂತ ಮೇಲು ಜಾತಿಯವನೊಡನೆ ಸಂಭೋಗ ಬಯಸಿ ಬಂದ ಕನ್ಯೆಗೆ ದಂಡ ಹಾಕಬಾರದು. ತನಗಿಂತ ಕೀಳು ಜಾತಿಯವನೊಡನೆ ಸಂಭೋಗ ಬಯಸಿದ ಕನ್ಯೆಯನ್ನು ಗೃಹಬಂಧನದಲ್ಲಿರಿಸಬೇಕು'. ಮತ್ತೂ ಮುಂದುವರೆದು ಶ್ಲೋಕ 366ರಲ್ಲಿ 'ಉತ್ತಮ ಜಾತಿಯ ಕನ್ಯೆಯನ್ನು ಭೋಗಿಸಿದ ಹೀನ ಜಾತಿಯವನು ವಧೆಗೆ ಅರ್ಹನಾಗುತ್ತಾನೆ' ಎಂದು ವಿಧಿಸಿದೆ. ಇಂಥ ದುರ್ವಿಚಾರಗಳು ಜನಸಾಮಾನ್ಯರಲ್ಲಿ ಅದೆಷ್ಟು ರಕ್ತಗತವಾಗಿವೆ ಎಂಬುದಕ್ಕೆ ಇತ್ತೀಚೆಗೆ ಹುಬ್ಬಳ್ಳಿಯ ಇನಾಂ ವೀರಾಪೂರದಲ್ಲಿ ಲಿಂಗಾಯತ ಸಮುದಾಯಕ್ಕೆ ಸೇರಿದ ಗರ್ಭಿಣಿ ಮಹಿಳೆಯೊಬ್ಬಳನ್ನು ಹೆತ್ತ ತಂದೆ ಕೊಲೆ ಮಾಡಿದ್ದೇ ಸಾಕ್ಷಿ. ಪ್ರಾಯಶಃ ಆಕೆ ಮೇಲ್ಜಾತಿಯ ಯುವಕನೊಂದಿಗೆ ಮದುವೆಯಾಗಿದ್ದರೆ ಇಷ್ಟು ಬರ್ಬರಿಕವಾಗಿ ಕೊಲೆಯಾಗುತ್ತಿರಲಿಲ್ಲವೇನೊ. ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಬಲವಾಗಿ ಪ್ರತಿಪಾದಿಸುವ ಮನುಸ್ಮೃತಿ ಪ್ರಾಚೀನ ಕಾಲದ ಪುಸ್ತಕ ಮಾತ್ರವಲ್ಲ; ಅದು ಇವತ್ತಿಗೂ ಜನರ ಮಸ್ತಕವನ್ನು ಆವರಿಸಿಕೊಂಡ ವಿಷಾನಿಲವಾಗಿದೆ. ಇಂಥ ಅಯೋಮಯ ವಾತಾವರಣದಲ್ಲಿ ಬಾಬಾಸಾಹೇಬರು ಅಂದು ಇಟ್ಟ ದಿಟ್ಟ ಹೆಜ್ಜೆಯನ್ನು ಮರೆಯದಿರೋಣ. ಮನುಸ್ಮೃತಿಯ ಅಪಸವ್ಯಗಳನ್ನು ಮೀರಿ ನಿಲ್ಲುವುದೇ ಇಂದಿನ ಜರೂರಿಯಾಗಿದೆ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ತ್ಯಾಗ–ಭೋಗವು ಕನ್ನಡ ಸಂಸ್ಕೃತಿಯ ನೈಸರ್ಗಿಕವಾದ ಶ್ವಾಸೋಚ್ಛ್ವಾಸವೇ ಆಗಿದೆ.
  —ದ.ರಾ. ಬೇಂದ್ರೆ
- ಉಪಕಾರ ಮಾಡಿದ ಸಜ್ಜನನಿಗೂ ನೀಚನಾದವನು ಅಪಕಾರವನ್ನೇ ಮಾಡಲು ಬಯಸುತ್ತಾನೆ.
  —ಕರ್ನಾಟಕ ಪಂಚತಂತ್ರ
- ಸ್ವಾರ್ಥಕ್ಕೆ ಸ್ಥಾನವೇ ಇಲ್ಲ ಎನ್ನುವಂತಿಲ್ಲ. ಅದು ಎಲ್ಲೆ ಮೀರಿ ಹೋಗದಂತೆ ನೋಡಿಕೊಳ್ಳಬೇಕು.
  —ಎ.ಎನ್. ಮೂರ್ತಿರಾವ್
- ಆನಂದ ಹೃದಯದಲ್ಲಿ ತೋರುವ ಬೆಳಕು, ಆತ್ಮದ ಕಾಂತಿ.
  —ಪುತಿನ
- ಯೋಗ್ಯತೆಯಿಲ್ಲದ ಯಶಸ್ಸಿನಷ್ಟು ಅನೀತಿಕರವಾದುದು ಮತ್ತಾವುದೂ ಇಲ್ಲ.
  —ರವೀಂದ್ರನಾಥ ಟ್ಯಾಗೋರ್
- ಇನ್ನೊಬ್ಬರ ಕಣ್ಣಿನ ಮೂಲಕ ಸುಖವನ್ನು ನೋಡುವುದು ಎಷ್ಟು ಸರಿ?
  —ಶೇಕ್ಸ್‌ಪಿಯರ್
- ನರಕದ ಮೂಲಕವೇ ಯಾವಾಗಲೂ ಸ್ವರ್ಗಕ್ಕೆ ರಸ್ತೆ ಇರುವುದು.
  —ಸ್ವಾಮಿ ವಿವೇಕಾನಂದ